6) ಸಂಳ್ಳ ತಾಲ್ಲೂಕು ವಿಧಾನಸಭಾ ಕ್ಷೇತ್ರದಲ್ಲಿರತಕ್ಕ ಸರ್ಕಾರಿ ಕಾಲೇಜುಗಳಲ್ಲಿ ಆಂಗ್ಲ ಉಪ ನ್ಯಾಸಕರ ಹಾಗೂ ಕಾಮರ್ಸ್ ಉಪನ್ಯಾಸಕರು ಇಲ್ಲದೇ ಇರುವುದು.

ಶ್ರೀ ಕೆ. ಕುಶಾಲ.—ಸಂಳ್ಳ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ (೧) ಸರಕಾರಿ ಕಿರಿಯ ಕಾಲೇಜಿ ಸೂಳ್ಯ, (೨) ಸರಕಾರಿ ಕಿರಿಯ ಕಾಲೇಜು ಬೆಳ್ಳಾರೆ (೩) ಸರಕಾರಿ ಕಿರಿಯ ಕಾಲೇಜು, ಪಂಜ, (೪) ಸರಕಾರಿ ಕಿರಿಯ ಕಾಲೇಜು ತಾಣಿಯೂರು (ಪುತ್ತೂರು)ಇಲ್ಲಿ ಕಳೆದ ೫ ವರ್ಷಗಳಿಂದ ಅನುಕ್ರಮವಾಗಿ ಆಂಗ್ಲ ಭಾಷಾ ಉಪನ್ಯಾಸಕರು ಕ್ರಮಸಂಖ್ಯೆ ೧,೨,೩ನೇ ಕಾಲೇಜುಗಳಲ್ಲಿ ಇರುವುದಿಲ್ಲ. ಅನುಕ್ರಮವಾಗಿ ಕ್ರಮ ಸಂಖ್ಯೆ ೨,೩,೪ ನೇ ಕಾಲೇಜುಗಳಲ್ಲಿ ಅಕೌಂಟೆನ್ಸಿ ಮತ್ತು ಕಾಮರ್ಸ್ ಉಪನ್ಯಾಸಕರು ಇರುವುದಿಲ್ಲ, ಮತ್ತು ಅನುಕ್ರಮವಾಗಿ ೧ ರಿಂದ ೪ನ್ನು ಕಾಲೇಜುಗಳ ಕೆಳಗಡೆ ಬರುವ ಸರಕಾರಿ ಪ್ರೌಢಶಾಲೆಗಳಲ್ಲಿ ಹಾಗೂ ಸರಕಾರಿ ಪ್ರೌಢಶಾಲೆ ಕಡಬ (ಪುತ್ತೂರು ತಾಲ್ಲೂಕು) ಇಲ್ಲಿ ಕೂಡ ಕಳೆದ ೫ ವರ್ಷಗಳಿಂದ ಅಧ್ಯಾಪಕರು ವಿವಿಧ ವಿಷಯಗಳಲ್ಲಿ ಇರುವುದಿಲ್ಲ ಈ ಕುರಿತು ಕಳೆದ ೩-೪ ವರ್ಷ ಗಳಿಂದ ಸರಕಾರಕ್ಕೆ ಹಾಗೂ ಇಲಾಖೆಗೆ ಬರೆದುಕೊಂಡರೂ ಈ ತನಕ ಈ ಮೇಲಿನ ಸರಕಾರಿ ಪ್ರೌಢಶಾಲೆ ಮತ್ತು ಸರಕಾರಿ ಕಿರಿಯ ಕಾಲೇಜು ವಿಭಾಗಗಳಲ್ಲಿ ಯಾವುದೇ ಒಂದು ಹುದ್ದೆಯನ್ನು ಭರ್ತಿಮಾಡಲು ಸರಕಾರದಿಂದ ಸಾಧ್ಯವಾಗಿಲ್ಲ. ಇದು ಒಂದು ವಿಷಾದನೀಯ ಸಂಗತಿಯಾಗಿರುವುದರಿಂದ. ಸರಕಾರ, ಸಚಿವರು ಈ ಕುರಿತು ಉಪನ್ಯಾಸಕರ, ಅಧ್ಯಾಪಕರ ನೇಮಕದೊಂದಿಗೆ ಸೂಕ್ತ ಉತ್ತರ ಕೊಡುವಂತೆ ಸರಕಾರವನ್ನು ಎಚ್ಚರಿಸುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಉಪಾಧ್ಯಕ್ಷರೆ, ಸೂಳ್ಳ ವಿಧಾನಸಭಾ ಕ್ಷೇತ್ರದಲ್ಲಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಆಂಗ್ಲ ಭಾಷೆಯ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವುದರಲ್ಲಿ ಸರ್ಕಾರ ಶೀಘ್ರ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

7) ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ನೇತ್ರಾವತಿ ನದಿಯಿಂದ ಪೈಪುಗಳ ಮೂಲಕ ನೀರು ಸರಬರಾಜು ಕೆಲಸ ವಿಳಂಬವಾಗಿರುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಂಗಳೂರು ವಿಶ್ವ ವಿದ್ಯಾಲಯಕ್ಕೆ ನೀರಿನ ಸರಬರಾಜಿಗಾಗಿ ನೇತ್ರಾವತಿ ನದಿಯಿಂದ ಪೈಪುಗಳ ಮೂಲಕ ನೀರನ್ನು ತರುವ ಬಾಬ್ತು ಪೈಪುಗಳನ್ನು ಹಾಗಿದು ಜೋಡಿಸುವ ಕೆಲಸ ಪ್ರಾರಂಭವಾಗಿ ಸುಮಾರು ನಾಲ್ಕು ವರ್ಷಗಳು ಕಳೆಯಿತು. ಉಳ್ಳಾಲ ಕ್ಷೇತ್ರದ ಬೊಳಿಯಾರು ಗ್ರಾಮವನ್ನು ಹಾದು ಈ ಪೈಪು ಜೋಡಣೆ ಮುಂದೆ ಸಾಗಿ ಕೊಣಾಜೆಗೆ ಸಾಗಿದೆ. ಆದರೆ ಪರಿಪೂರ್ಣ ಕೆಲಸ ಆಗಿಲ್ಲ ಎಂದು ತಿಳಿದಿದೆ. ಮಂಗಳೂರು ವಿಶ್ವವಿದ್ಯಾಲಯಂಕ್ಕೆ ಅತಿ ಅಗತ್ಯವಾಗಿ ನೀರಿನ ಅವಶ್ಯಕತೆ ಇದೆ. ಸುತ್ತಮುತ್ತಲಿನ ಜನರಿಗೂ ಇದರಿಂದ ಉಪಕಾರವಾಗುತ್ತದೆ. ಆದ ಕಾರಣ ಈ ನೀರು ಸರಬರಾಜು ಯೋಜನೆ ಯಾವಾಗ ಪರಿಪೂರ್ಣವಾಗುವುದು? ಈ ಕುರಿತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗೆ ಕುಡಿಯುವ ನೀರಿನ ಪೂರೈಕೆ ಯೋಜನೆಯು ೧೦೦ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಮಂಜೂರಾಗಿದೆ. ಈ ಯೋಜನೆಗೆ ಹಣ ಒದಗಿಸುವುದು ವಿಶ್ವವಿದ್ಯಾನಿಲಯದ ಹೊಣೆಯಾಗಿದೆ. ಯೋಜನೆಯನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯದಾಗಿದೆ,

ಈ ಯೋಜನೆಗೆ ನೀರಿನ ಮೂಲ ಸ್ಥಾವರ ನೇತ್ರಾವತಿ ನದಿಯಾಗಿರುತ್ತದೆ. ಈ ಯೋಜನೆಯ ಮೂಲ ಸ್ಥಾವರದ ಕೆಲಸ, ಏರು ಕೊಳವೆ ಮಾರ್ಗದ ಕೆಲಸ ಮುಗಿದಿದ್ದು, ಮೂಲ ಸ್ಥಾವರದಲ್ಲಿ ಪಂಪನ್ನು ಚಾಲೂ ಮಾಡಲಾಗಿದೆ. ಬ್ರೇಕ್ ಪ್ರೆಷರ್ ಟ್ಯಾಂಕ್, ಗ್ರಾವಿಟಿ ಮೈನ್ ಕೆಲಸಗಳೂ ಮುಗಿದಿವೆ. ಮಧ್ಯಂತರ ಪಂಪುಗಳನ್ನು ಜೋಡಿಸಲಾಗಿದೆ. ಕರ್ನಾಟಕ ವಿದ್ಯುತ್ ಮಂಡಲಿಯು ತಂತಿಯನ್ನು ಎಳೆಯುವ ಕೆಲಸವನ್ನು ಮಾಡುತ್ತಿದ್ದು ಇನ್ನು ೧೫ ದಿವಸಗಳಲ್ಲಿ ಈ ಪಂಪನ್ನು ಚಾಲೂ ಮಾಡಿ, ನೇತ್ರಾವತಿ ನೀರನ್ನು ನೇರವಾಗಿ ವಿಶ್ವವಿದ್ಯಾಲಯಕ್ಕೆ ಸರಬರಾಜು ಮಾಡಬಹುದಾಗಿದೆ. ೦.೫೦ ದಶಲಕ್ಷ ಗ್ಯಾಲನ್ ಸಾಮರ್ಥ್ಯದ ನೀರು ಶುದ್ಧೀಕರಣಾಗಾರದ ಕಾಮಗಾರಿಯು ಪ್ರಗತಿಯಲ್ಲಿದ್ದು ೧೯೮೮ರ ಡಿಸೆಂಬರ್ ಹೊಶ್ತಿಗೆ ಪೂರ್ಣಗೊಳಿಸಿ ಶೋಧಿಸಿದ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ.